**<u>ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ</u>**

**<u>ಸಿ.ಸಿ. ನಂಃ 1027/2023</u>**

*ಪಿರ್ಯಾದಿದಾರರು* : *ಸರ್ಕಾರದ ಪರವಾಗಿ*-ಅಬಕಾರಿ ನಿರೀಕ್ಷಕರು ಹೊಳಲ್ಕೆರೆ ವಲಯ, ಹೊಳಲ್ಕೆರೆ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ ಟಿ. ಕರಿಯಪ್ಪ ಬಿನ್ ಲೇಟ್ ತಿಪ್ಪೇಸ್ವಾಮಿ,

**<u>ದೋಷಾರೋಪಣೆ</u>**

ಶ್ರೀ ಉಮೇಶ, ಎಂ.ಪಿ., ಬಿ.ಎ.ಎಲ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಹೊಳಲ್ಕೆರೆ ಆದ ನಾನು

ಆರೋಪಿಃ ಟಿ. ಕರಿಯಪ್ಪ ಬಿನ್ ಲೇಟ್ ತಿಪ್ಪೇಸ್ವಾಮಿ,
ವಯಸ್ಸುಃ *37* ವರ್ಷಗಳು, ವೃತ್ತಿಃ ವ್ಯವಸಾಯ,
ವಾಸಃ ಬೊಮ್ಮನಕಟ್ಟೆ ಗ್ರಾಮ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

ಆರೋಪಿತನಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕಃ 13-04-2023 ರಂದು ರಾತ್ರಿ 8-00 ರ ಸಮಯದಲ್ಲಿ ಹೊಳಲ್ಕೆರೆ ವ್ಯಾಪ್ತಿಯ ಹೊಳಲ್ಕೆರೆ-ಶಿವಮೊಗ್ಗ ರಸ್ತೆಯಲ್ಲಿರುವ ಪೋಲೀಸ್ ವಸತಿ ಗೃಹದ ಮುಂಭಾಗದ ರಸ್ತೆಯಲ್ಲಿ ಆರೋಪಿತನಾದ ನೀನು ನೊಂದಣಿ ಸಂಖ್ಯೆ ಇಲ್ಲದ ಆಕ್ಟಿವಾ ಹೋಂಡಾ ಕಂಪನಿಯ ಚಾಸಿಸ್ ನಂಃ ಎಂ ಇ 4 ಜೆ ಎಫ್ 50 ಎ ಎಫ್ ಜೆ ಟಿ 219698 ರ ದ್ವಿಚಕ್ರ ವಾಹನದಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 25.920 ಲೀಟರ್ ಮದ್ಯವನ್ನು ಕಾನೂನು ಬಾಹಿರವಾಗಿ ಯಾವುದೇ ಪರವಾನಿಗೆಯನ್ನು ಹೊಂದದೇ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸ್ವಾಧೀನ ಹೊಂದಿ, ಈ ನ್ಯಾಯಾಲಯದ ಸಂಜ್ಞೆಯೊಳಗೆ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಈ ಮೇಲೆ ಹೇಳಿದ ಅದೇ ದಿನ ಸ್ಥಳ ವೇಳೆಯಲ್ಲಿ ಆರೋಪಿತನಾದ ನೀವು ಕಾನೂನು ಬಾಹಿರವಾಗಿ ಸಮಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೇ ಚಾಸಿಸ್ ನಂಃ ಎಂ ಇ 4 ಜೆ ಎಫ್ 50 ಎ ಎಫ್ ಜೆ ಟಿ 219698 ರ ದ್ವಿಚಕ್ರ ವಾಹನದಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 25.920 ಲೀಟರ್ ಮದ್ಯವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದು, ಕರ್ನಾಟಕ ಅಬಕಾರಿ ಕಾಯಿದೆ ಕಲಂ 11, 12, 14,15 ಮತ್ತು 43(ಎ)ನ್ನು ಉಲ್ಲಂಘನೆ ಮಾಡಿ ಕಲಂ 38(ಎ) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಸಿವಿಲ್ ನ್ಯಾಯಾಧೀಶರು ಮತ್ತು

ದಿ: **21**-11-2023

ಜೆ ಎಂ ಎಫ್ ಸಿ, ಹೊಳಲ್ಕೆರೆ.